ಗಾಜಿನ ಮೇಲೆ ಉಕ್ಕಿ ಬಂದ ಕಣ್ಣೀರನ್ನು ಸುರಿಸುತ್ತಿತ್ತು. ಮಸಕಾದ ಹೊರ ಪ್ರಪಂಚದಲ್ಲಿ ಎಲ್ಲವೂ ಅಸ್ಪಷ್ಟವೆನ್ನಿಸಿ, ಹೊಸ ಡಿಕಾಕ್ಷನ್ ಹಾಕಿಕೊಂಡು ಬಿಸಿಬಿಸಿ ಕಾಫಿ ಕುಡಿಯೋಣವೆಂದು ಮತ್ತೆ ಅಡುಗೆ ಮನೆ ಹೊಕ್ಕ. 'ಮಿಯಾಂವ್' ಎನ್ನುತ್ತಾ ಬೆಕ್ಕು ಅವನ ಕಾಲಡಿ ನುಸುಳಿಕೊಂಡು ಅವನ ಮನದಿಚ್ಛೆ ಮೊದಲೇ ಅರಿತಂತೆ ಪುಳಕ್ ಎಂದು ಅಡುಗೆ ಮನೆಗೋಡಿತು.

'ಯಾಕೋ ಹಸಿವೆನೋ? ಹಾಲ್ ಸಾಕಾಗೊಲ್ವಲೋ?' ಮತ್ತೊಮ್ಮೆ ಫ್ರಿಡ್ಜ್ ಎಲ್ಲಾ ತಲಾಶಿಸುತ್ತಾ ಬೆಕ್ಕಿನತ್ತ ಕಣ್ಣಾಯಿಸಿದ. ಎರಡು ಕಾಲಿನಲ್ಲಿ ಕುಳಿತು ಅವನತ್ತಲ್ಲೇ ದೈನ್ಯದಿಂದ ನಿಟ್ಟಿಸುತ್ತಿದ್ದ ಅದು, ಅವನ ಕಣ್ಣು ಸಂಧಿಸಿದ್ದೇ 'ಮಿಯಾಂಮ್!' ಎಂದು ಆರ್ದ್ರವಾಗಿ ಮಿಂಯ್‌ಗುಟ್ಟಿತು. ಬೇರೆ ಹಾಲು ಸಿಗದೇ ಮೂಲೆಯಲ್ಲಿಟ್ಟ ಎಂದಿನದೋ ಅರ್ಧ ಖಾಲಿಯಾಗಿದ್ದ ಬ್ರೆಡ್ ಪ್ಯಾಕೆಟ್ ತೆಗೆದ. ಬ್ರೆಡ್ ಫ್ರಿಡ್ಜ್‌ನಲ್ಲಿಡಬೇಡ, ಗಟ್ಟಿಯಾಗುತ್ತೆ ಎಂದು ಎಷ್ಟು ಬಾರಿ ಹೇಳಿದರೂ, ಎಂದೋ ತಂದ ಬ್ರೆಡ್‌ನಲ್ಲಿ ಅರ್ಧ ಖಾಲಿ ಮಾಡಿ ಮತ್ತುಳಿದಿದ್ದನ್ನು ಫ್ರಿಡ್ಜ್ ಮೂಲೆಗೆ ತಳ್ಳಿಟ್ಟಿದ್ದನ್ನು ನೋಡಿ ಸುಜಾತಾಳ ಮೇಲೆ ಎಂದಿಲ್ಲದ ಸಿಟ್ಟಿನಿಂದ ಸಿಡಿಮಿಡಿಗುಟ್ಟುತ್ತಾ, ಫ್ರಿಡ್ಜಿನ ಕಂಪಾರ್ಟ್‌ಮೆಂಟಿನಲ್ಲಿ ಅವನೇ ತಂದು ಜೋಡಿಸಿಟ್ಟಿದ್ದ ವಿನೇಗರ್ ಮಿಕ್ಸಡ್ ಸಾಲ್ಟೆಡ್ ಆಲಿವ್ ಮತ್ತು ಮಸ್ಟರ್ಡ್ ಬಟರನ್ನು ಹೊರ ತೆಗೆದ. ಬ್ರೆಡ್ಡನ್ನು ಕವರಿನಿಂದ ಆಚೆ ಎಳೆದು ಅದರ ಒಣಗಿ ಸುಕ್ಕುಗಟ್ಟಿದ ಶರೀರದ ಮೇಲೆಲ್ಲಾ ಬೆಣ್ಣೆ ಥಾಳಾಗಿ ಬಳಿದು, ಹದವಾಗಿ ಮಸಾಜ್ ಮಾಡಿ, ವಿನೇಗರ್‌ನಲ್ಲಿ ನೆಂದ ಆಲಿವ್ ಹೋಳನ್ನಷ್ಟು ಅದರ ಮೇಲೆ ಸುರಿದು, ಅಂದವಾಗಿ ಅಲಂಕರಿಸಿ, ಮೇಲೆ ಪಿರಿಪಿರಿ ಪೌಡರ್ ಉದುರಿಸಿ, ಮೆಲ್ಲಗೆ ಕಚಕ್ಕನೆ ಕಚ್ಚಿ ಅಗಿಯುತ್ತಾ ಕ್ಷಣ ಕಣ್ಣು ಮುಚ್ಚಿದ.

ಹಿಂದಿನ ರಾತ್ರಿಯೇನೂ ತಿಂದಿರಲಿಲ್ಲವೆನ್ನುವುದು ನೆನಪಾಗಿ ಹೊಟ್ಟೆ ತಳಮಳಿಸುತ್ತಿದ್ದದ್ದು ಆಗಷ್ಟೇ ಗಮನಕ್ಕೆ ಬಂದು ಹಸಿವು ಜೋರಾದಂತೆ ಅನ್ನಿಸಿ, ಪ್ಯಾಕೆಟ್ ಅಗಲಿಸಿ ನೋಡಿದರೆ, ಮತ್ತೆರಡು ಪೀಸ್ ಮಾತ್ರ ಇದ್ದದ್ದು ಗೋಚರಿಸಿತು. ತನಗೂ ಒಂದೆರಡು ಪೀಸ್ ಕೊಡಬಹುದೆಂದು ಅವನನ್ನೇ ತದೇಕ ದೃಷ್ಟಿಯಿಂದ ನೋಡುತ್ತಿದ್ದ ಬೆಕ್ಕು, ನಿರಾಶೆಯಿಂದ ಹತಾಶೆಗೊಂಡು 'ಮಿಯಾಂವ್!' ಅಂದಾಗಲೇ ಅವನಿಗೆ ಥಕ್ಕನೆ ಬೆಕ್ಕಿನ ನೆನಪಾಗಿ, ಅದನ್ನು ಮರೆತದಕ್ಕೆ ಆಶ್ಚರ್ಯಪಡುತ್ತಾ, 'ಅಲ... ಲೇ... ಹೌ ಕುಡ್ ಐ ಫರ್ಗೆಟ್ ಯೂ ಪುಟ್ಟಾ, ತಕ್ಕೋ ಮಾರಾಯ!...' ಎಂದು ಅರ್ಧ ತಿಂದ ಬ್ರೆಡ್ಡನ್ನು ಅದಕ್ಕೆಸೆದು, ಕಾಫಿ ಡಿಕಾಕ್ಷನ್ ಒಂದು ಕಪ್ಪಿಗೆ ಬಗ್ಗಿಸಿಕೊಂಡು, 'ಹಾಲ್ ಇಲ್ವೋ. ತೀರಿ ಹೋಗಿದೆ. ಬ್ಲಾಕ್ ಕಾಫೀನೇ ಒಂಚೂರ್ ಕುಡಿದ್ ಬಿಡು!...' ಎಂದು ಅದರ ಬೋಗಣಿಗೆ ಡಿಕಾಕ್ಷನ್ ಸುರುವಿ, ಅವನು ಮತ್ತಷ್ಟು ಕಪ್ಪು ಕಾಫಿಯನ್ನು ತನ್ನ ಕಪ್ಪಿಗೆ ಸುರುವಿಕೊಂಡ. ಬೆಕ್ಕು ನಿಧಾನಕ್ಕೆ ಬ್ರಡ್ ತಿಂದು, ಬೋಗುಣಿಯನ್ನೊಮ್ಮೆ ಮೂಸಿ, 'ಮಿಯಾಂವ್!' ಎಂದು ಮುಲುಗುಟ್ಟಿ ಅವನನ್ನೇ ದುರುದುರು ನೋಡತೊಡಗಿತು.

ಸಟ್ಟನೇ ಅವನಿಗೆ ಯಾಕೋ ಎಲ್ಲವೂ ಬೇಜಾರೆನ್ನಿಸಿತು. ಸರ್ವರ್ ಡೌನ್ ಆಗಿ ಲೋಡ್ ಆಗಲೊಪ್ಪದ ಫೇಸ್‌ಬುಕ್ ಅಕೌಂಟಿನಂತೆ ಬ್ಲಾಂಕ್‌ಗೊಂಡ ತಲೆಯಲ್ಲಿ ಬರೀ ಬ್ಲರ್ ಇಮೇಜ್‌ಗಳೇ. ರೀ ಚಾರ್ಜ್‌ಗಿಡುವ ಮನಸ್ಸಿಲ್ಲದೇ ಹಾಲನ್ನಾದರೂ ತರಬಾರದೇಕೆ ಎಂದುಕೊಂಡು ಬಾಗಿಲು ತೆರೆದು ಹೊರ ಹಣಕಿದ. ಆಚೆ ಘೋರೆಂದು ಮಳೆ ಹೊರಳಾಡುತ್ತಾ ಗೋಳಾಡುತ್ತಿತ್ತು. 'ಥತ್! ನನ್ನ ಜೀವನದ ಹಾಗೆ!' ಅನ್ನಿಸಿ, ತೆರೆದಷ್ಟೇ ರಭಸದಲ್ಲಿ ಬಾಗಿಲು ಹಾಕಿದ. ಮುಚ್ಚಿದ ಬಾಗಿಲೊಳಗೆ ಸಟ್ಟನೆ ಸದ್ದು ಕಳೆದುಕೊಂಡ ಪ್ರಪಂಚ. ಈ ಮೊದಲಿನ ಹಾಗೆ ಭಣಗುಟ್ಟುವ ಖಾಲಿತನ ಗುಂಯ್‌ಗುಡುತ್ತಾ ಮತ್ತೆ ಬಿದ್ದುಕೊಂಡಿತು. ಬಾಗಿಲು ತೆರೆಯುವ